ಬೆಂಗಳೂರು ನಗರ ವಿಶ್ವವಿದ್ಯಾನಿಲಯ

**BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–12/ಸಾಮಾನ್ಯ ಸಭೆ/61 /2021–22 ದಿನಾಂಕ: 29.07.2021

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 16.06.2021 ರಂದು ಜರುಗಿದ ಸಿಂಡಿಕೇಟ್ 12 ನೇ ಸಾಮಾನ್ಯ ಸಭೆಯ ನಡಾವಳಿಗೆ ತಿದ್ದುಪಡಿ ಕುರಿತು.**

ಉಲ್ಲೇಖ: 1) ಈ ಕಛೇರಿ ಪತ್ರ ಸಂಖ್ಯೆ: ಬಿಸಿಯು/ಎಸ್‌ವೈಎನ್–12/57/2021–22 ದಿನಾಂಕ: 22..06.2021.
2) ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ, ಮಾನ್ಯ ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಇಮೇಲ್ ದಿನಾಂಕ: 23 ಜೂನ್ 2021.
3) ಕುಲಪತಿಗಳ ಅನುಮೋದನೆ ದಿನಾಂಕ: 29.07.2021.

ದಿನಾಂಕ: 16.06.2021 ರಂದು ಜರುಗಿದ ಸಿಂಡಿಕೇಟ್ 12 ನೇ ಸಾಮಾನ್ಯ ಸಭೆಯ ನಡವಳಿಯ ಟೇಬಲ್ ಅಜಂಡ–1 ರ ತೀರ್ಮಾನ ಕುರಿತಂತೆ ಮಾನ್ಯ ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಉಲ್ಲೇಖ (2) ರ ಅಭಿಪ್ರಾಯವನ್ನು ಪರಿಗಣಿಸಿ ಸದರಿ ಸಿಂಡಿಕೇಟ್ ಸಭೆಯ ತೀರ್ಮಾನಕ್ಕೆ ಅಂಶಿಕ ಬದಲಾವಣೆಗಳನ್ನು ಮಾಡಿದೆ. **ತಿದ್ದುಪಡಿ ನಡವಳಿಯನ್ನು ಈ ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ.**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ದಿನಾಂಕ 16.06.2021 ರ ಸಿಂಡಿಕೇಟ್ ಸಭೆಯ ತಿದ್ದುಪಡಿ ನಡವಳಿ.

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್–12/ಸಾಮಾನ್ಯಸಭೆ/69 /2021–22 ದಿನಾಂಕ: 29.07.2021

ದಿನಾಂಕ 16.06.2021 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 12 ನೇ ಸಾಮಾನ್ಯ ಸಭೆಯ ನಡವಳಿಗೆ ತಿದ್ದುಪಡಿ.

ದಿನಾಂಕ 16.06.2021 ರ ಸಿಂಡಿಕೇಟ್ ಸಭೆಯ ನಡವಳಿಗಳ ಟೇಬಲ್ ಅಜಂಡ–1 ಕರಿತಂತೆ ದಾಖಲಿಸಲಾದ ತೀರ್ಮಾನಕ್ಕೆ ಕೆಳಕಂಡ ಅಂಶಿಕ ಬದಲಾವಣೆಯನ್ನು ಮಾಡಲಾಗಿದೆ.

<u>ಟೇಬಲ್ ಅಜಂಡ–1</u>

ವಿಷಯ: ಮೇವಾ ಡಿಗ್ರಿ ಕಾಲೇಜಿನ ಎಂ.ಬಿ.ಎ ಕೋರ್ಸಿನ ಹೊಸ ಸಂಯೋಜನೆ ಬಗ್ಗೆ.

ಸಿಂಡಿಕೇಟ್ ನಿರ್ಣಯ:

ವಿಷಯದ ಚರ್ಚಿಸಿದ ಸಭೆಯು, ಈ ಕಾಲೇಜಿಗೆ ಸಂಬಂಧಿಸಿದ ಸ್ಥಳೀಯ ತಪಾಸಣಾ ವರದಿಯನ್ನು ಪರಾಮರ್ಶಿಸಿ, Renewal of existing affiliation ಅನ್ನು ಅನುಮೋದಿಸಿತು ಮತ್ತು ಹೆಚ್ಚುವರಿ (Additional) **ಕೋರ್ಸುಗಳಿಗೆ ಸಂಬಂಧಿಸಿದ ವರದಿಯನ್ನು ಸರ್ಕಾರ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021, ಬೆಂಗಳೂರು ದಿನಾಂಕ 12.02.2021 ರಂತೆ ಪರಿಗಣಿಸಲು ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಿತು.**

ಸದಸ್ಯಕಾರ್ಯದರ್ಶಿ ಹಾಗೂ
ಕುಲಸಚಿವರು

ಕುಲಪತಿಗಳು

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್-12/57/2021-22

ದಿನಾಂಕ: 22..06.2021.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 16.06.2021 ರಂದು ಜರುಗಿದ ಸಿಂಡಿಕೇಟ್ 12 ನೇ ಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: **16.06.2021** ರಂದು ಪೂರ್ವಾಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 12 ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ

BENGALURU CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್-12/ಸಾಮಾನ್ಯಸಭೆ/ 57 /2021-22 ದಿನಾಂಕ: 22.06.2021

**ದಿನಾಂಕ 16.06.2021 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 12 ನೇ ಸಾಮಾನ್ಯ ಸಭೆಯ ನಡವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ ಪಿ.ಹೆಚ್.ಡಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಪ್ರೊ ಆರ್. ಮುಗೇಶಪ್ಪ<br>ಕಾಲೇಜು ಶಿಕ್ಷಣ ಇಲಾಖೆ ಪರವಾಗಿ | ಸದಸ್ಯರು |
| 3. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 4. | ಶ್ರೀ ಹೆಚ್.ಆರ್. ಸತೀಶ್ | ಸದಸ್ಯರು |
| 5. | ಪ್ರೊ. ಕೆ. ರಮೇಶ್ | ಸದಸ್ಯರು |
| 6. | ಡಾ. ಪಿ. ವಿ. ಪದ್ಮಜಾ | ಸದಸ್ಯರು |
| 7. | ಪ್ರೊ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 8. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 11. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 12. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 14. | ಡಾ. ವಿ. ಗಾಯತ್ರಿ | ಸದಸ್ಯರು |
| 15. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಪ್ರೊ. ಬಿ. ರಮೇಶ್<br>I/c ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಮತ್ತು ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು ಹಾಗೂ ಸಭೆಯನ್ನು ಆರಂಭಿಸಲು ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

ಮಾನ್ಯ ಕುಲಪತಿಗಳು ಸಭೆಯನ್ನು ಆರಂಭಿಸಿ ಪ್ರಸ್ತಾವಿಕವಾಗಿ ಮಾತನಾಡಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2ನೇ ಕುಲಪತಿಗಳಾಗಿ ಸೇವೆಯನ್ನು ಸಲ್ಲಿಸಲು ಅವಕಾಶ ಕಲ್ಪಿಸಿದ ಕರ್ನಾಟಕ ಸರ್ಕಾರ ಹಾಗೂ ಘನತೆವೆತ್ತ ರಾಜ್ಯಪಾಲರಿಗೆ ಧನ್ಯವಾದಗಳನ್ನು ತಿಳಿಸಿದರು ಮತ್ತು ಪ್ರಥಮ ಕುಲಪತಿಗಳಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಪ್ರೋ. ಜಾಫೆಟ್ ಮತ್ತು ಹಂಗಾಮಿ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ ಪ್ರೊ. ಎಂ. ನರಸಿಂಹ ಮೂರ್ತಿ ರವರಿಗೆ ಧನ್ಯವಾದವನ್ನು ಅರ್ಪಿಸಿದರು ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸರ್ವಾಂಗೀಣ ಅಭಿವೃದ್ಧಿಗೆ ಮಾನ್ಯ ಸಿಂಡಿಕೇಟ್ ಸದಸ್ಯರುಗಳ ಸಹಕಾರವನ್ನು ಕೋರಿದರು.

ಮುಂದುವರೆದು ಸೆಂಟ್ರಲ್ ಕಾಲೇಜಿನ ಐತಿಹಾಸಿಕ ಮೈಲುಗಲ್ಲುಗಳನ್ನು ನೆನಪಿಸಿ ಆರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಭಾಗವಾಗಿದ್ದ ಸೆಂಟ್ರಲ್ ಕಾಲೇಜು ಶೈಕ್ಷಣಿಕ ಕ್ಷೇತ್ರದಲ್ಲಿ ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ರಾಷ್ಟ್ರೀಯ ಶೈಕ್ಷಣಿಕ ನೀತಿ 2019ರ ಆಧಾರಿತವಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯವನ್ನು ಗುಣಾಂತ್ಮಕ ಶೈಕ್ಷಣಿಕ ಕೇಂದ್ರವನ್ನಾಗಿ ರೂಪಿಸುವ ಸಲುವಾಗಿ ಶಿಕ್ಷಕ ಮತ್ತು ಶಿಕ್ಷಕೇತರರ ನೇಮಕಾತಿ, ಮೂಲಭೂತ ಸೌಕರ್ಯಗಳು, ಐ.ಟಿ ಸವಲತ್ತುಗಳು ಇವೇ ಮುಂತಾದ ಮೂಲಭೂತ ಸೌಲಭ್ಯಗಳನ್ನು ಆದಷ್ಟು ಶೀಘ್ರವಾಗಿ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಬೇಕಾಗಿರುವುದನ್ನು ಪ್ರಾಸ್ತಪಿಸಿ, ಕೋವಿಡ್-19 ಪ್ಯಾಂಡಮಿಕ್ ತಂದಿರುವ ಶೈಕ್ಷಣಿಕ ಸವಾಲುಗಳನ್ನು ಯಶಸ್ವಿಯಾಗಿ ನಿರ್ವಹಿಸುವ ಕಾರ್ಯ ಯೋಜನೆಯನ್ನು ಅನುಷ್ಠಾನಗೊಳಿಸಬೇಕಿದೆ ಎಂದು ತಿಳಿಸಿದರು.

ನಂತರ ಸಿಂಡಿಕೇಟ್‌ನ ಮಾನ್ಯ ಸದಸ್ಯರುಗಳು ಸ್ವಪರಿಚಯ ಮಾಡಿಕೊಂಡು ಮಾನ್ಯ ಕುಲಪತಿಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಸ್ವಾಗತಿಸಿದರು ಮತ್ತು ವಿಶ್ವವಿದ್ಯಾನಿಲಯದ ಶ್ರೇಯಾಭಿವೃದ್ಧಿಗೆ ನಾವೆಲ್ಲರು ತಮ್ಮಗಳ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ನಂತರ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 1:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಈ ಕೆಳಕಂಡ ಸಿಂಡಿಕೇಟ್ ಸಭೆಗಳ ನಡವಳಿಗಳನ್ನು ಧೃಡೀಕರಿಸುವ ಬಗ್ಗೆ

1) ದಿನಾಂಕ 18.12.2020 ರಂದು ಜರುಗಿದ 10 ನೇ ಸಿಂಡಿಕೇಟ್ ಸಭೆಯ;
2) ದಿನಾಂಕ 24.12.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ;
3) ದಿನಾಂಕ 20.01.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ;
4) ದಿನಾಂಕ 16.02.2021 ರಂದು ಜರುಗಿದ 11 ನೇ ಸಿಂಡಿಕೇಟ್ ಸಭೆಯ;
5) ದಿನಾಂಕ 25.02.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ;
6) ದಿನಾಂಕ 26.02.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಧೃಡಿಕರಿಸುವ ಕುರಿತು.

ಸಿಂಡಿಕೇಟ್ ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ದಿನಾಂಕ 18.12.2020 ರಂದು ಜರುಗಿದ 10 ನೇ ಸಿಂಡಿಕೇಟ್ ಸಭೆಯ, ದಿನಾಂಕ 24.12.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ, ದಿನಾಂಕ 20.01.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ, ದಿನಾಂಕ 16.02.2021 ರಂದು ಜರುಗಿದ 11 ನೇ ಸಿಂಡಿಕೇಟ್ ಸಭೆಯ, ದಿನಾಂಕ 25.02.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ 26.02.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯು ಪರಾಮರ್ಶಿಸಿ ಧೃಢೀಕರಿಸಿತು.

**ವಿಷಯ ಸಂಖ್ಯೆ 2: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಈ ಕೆಳಕಂಡ ಸಿಂಡಿಕೇಟ್ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಗಳನ್ನು ಅನುಮೋದಿಸುವ ಕುರಿತು**

1) ದಿನಾಂಕ 18.12.2020 ರಂದು ಜರುಗಿದ 10 ನೇ ಸಿಂಡಿಕೇಟ್ ಸಭೆಯ;
2) ದಿನಾಂಕ 24.12.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ;
3) ದಿನಾಂಕ 20.01.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ;
4) ದಿನಾಂಕ 16.02.2021 ರಂದು ಜರುಗಿದ 11 ನೇ ಸಿಂಡಿಕೇಟ್ ಸಭೆಯ;
5) ದಿನಾಂಕ 25.02.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ;
6) ದಿನಾಂಕ 26.02.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ;

ನಡವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಜರುಗಿದ ಆರು ಸಿಂಡಿಕೇಟ್ ಸಭೆಗಳ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಕುರಿತು ಸಭೆಯಲ್ಲಿ ಪ್ರತೀ ಸಭೆಯ ವಿಷಯವಾರು ತೀರ್ಮಾನಗಳ ಮೇಲೆ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮಗಳ ಕುರಿತು ಪರಾಮರ್ಶಿಸಿತು, ದಿನಾಂಕ 16.02.2021 ರಂದು ಜರುಗಿದ 11 ನೇ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ: 03 ಮತ್ತು 11 ರ ನಡವಳಿಯ ಮೇಲೆ ಕೈಗೊಂಡಿರುವ ಕ್ರಮದ ಕುರಿತು ಸದಸ್ಯರಾದ ಶ್ರೀ ಕರಣ್ ಕುಮರ್ ಅವರು ಮತ್ತು ಶ್ರೀಮತಿ ಜ್ಯೋತಿ ವಿಜಯ್ ಅವರು ಮಾತಾನಾಡಿ ಸದರಿ ವಿಷಯದ ಬಗ್ಗೆ ಸಿಂಡಿಕೇಟ್ ನಿರ್ಣಯದ ಕುರಿತು ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿರುವುದಾಗಿ ತಿಳಿಸಿದರು. ಸದಸ್ಯರಾದ ಶ್ರೀ ಕರಣ್ ಕುಮರ್ ಅವರು ಮತ್ತು ಶ್ರೀಮತಿ ಜ್ಯೋತಿ ವಿಜಯ್ ಅವರು ಸಿಂಡಿಕೇಟ್ ನಿರ್ಣಯದ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಅಸಮ್ಮತಿಯು (Dissent) ನಡವಳಿಯಲ್ಲಿ ದಾಖಲಾಗಿರುವ ಅಂಶವನ್ನು ಅವಗಾಹಿಸಿದ ಸಭೆಯು ಅನುಸರಣಾ ಕ್ರಮವನ್ನು ಪರಾಮರ್ಶಿಸಿತು.

ಸಿಂಡಿಕೇಟ್ ನಿರ್ಣಯ:

ದಿನಾಂಕ 18.12.2020 ರಂದು ಜರುಗಿದ 10 ನೇ ಸಿಂಡಿಕೇಟ್ ಸಭೆಯ, ದಿನಾಂಕ 24.12.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ, ದಿನಾಂಕ 20.01.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ, ದಿನಾಂಕ 16.02.2021 ರಂದು ಜರುಗಿದ 11 ನೇ ಸಿಂಡಿಕೇಟ್ ಸಭೆಯ, ದಿನಾಂಕ 25.02.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ಮತ್ತು ದಿನಾಂಕ 26.02.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಪರಾಮರ್ಶಿಸಿ ಅನುಮೋದಿಸಿತು.

ವಿಷಯ ಸಂಖ್ಯೆ 3: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ನಿಕಾಯದ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಪರೀಕ್ಷಾ ಮಂಡಳಿಗಳ ರಚನೆಯನ್ನು ಘಟನೋತ್ತರ ಅನುಮೋದನೆ ಪಡೆಯುವ ಕುರಿತು.

ಈ ವಿಷಯದ ಕುರಿತು ಕುಲಸಚಿವರು (ಮೌಲ್ಯಮಾಪನ) ಮಾತಾನಾಡಿ 2020-21 ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ನಿಕಾಯ ಹೊರತುಪಡಿಸಿ ಇನ್ನುಳಿದ ವಿಷಯಗಳ ಪರೀಕ್ಷಾ ಮಂಡಳಿಗಳನ್ನು ಸಿಂಡಿಕೇಟ್ ಅನುಮೋದನೆಯೊಂದಿಗೆ ರಚಿಸಲಾಗಿದೆ. ಶಿಕ್ಷಣ ನಿಕಾಯದ ಅಧ್ಯಯನ ಮಂಡಳಿಯನ್ನು ರಚಿಸದ ಕಾರಣ, ಅಂದಿನ ಸಭೆಯಲ್ಲಿ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದ ಪರೀಕ್ಷಾ ಮಂಡಳಿಗಳನ್ನು ರಚಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದ ಶಿಕ್ಷಣ ನಿಕಾಯದ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಕ್ಕೆ ಸಂಬಂಧಿಸಿದ ರಚಿಸಲಾದ ಪರೀಕ್ಷಾ ಮಂಡಳಿಗಳನ್ನು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ರ ಶೈಕ್ಷಣಿಕ ಸಾಲಿಗೆ B.Ed, B.P.Ed ಹಾಗೂ M.Ed ಕೋರ್ಸುಗಳ ಪರೀಕ್ಷಾ ಮಂಡಳಿಗಳಿಗೆ ಘಟನೋತ್ತರ ಅನುಮೋದನೆ ನೀಡಲಾಯಿತು. ಹಾಗೂ ಸ್ನಾತಕ / ಸ್ನಾತಕೋತ್ತರ ಪರೀಕ್ಷಾ ಮಂಡಳಿಗಳ 7 ವಿಷಯಗಳ ಅಧ್ಯಕ್ಷರ ನೇಮಕಾತಿಯಲ್ಲಿ ಆಗಿರುವ ಬದಲಾವಣೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.**

ವಿಷಯ ಸಂಖ್ಯೆ 4: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷಾ ಸಂಭಾವನೆಗಳನ್ನು ಪರಿಷ್ಕರಿಸುವ ಸಂಬಂಧ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷಾ ಸಂಭಾವನೆಗಳ ಪರಿಷ್ಕರಣೆಯ ಸಂಬಂಧ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಡಾ. ಅರವಿಂದ್ ರವರು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷಾ ಸಂಭಾವನೆಗಳನ್ನು ಪರಿಷ್ಕರಿಸುವ ಸಂಬಂಧ ಈ ಮೊದಲೇ ಸಿಂಡಕೇಟ್‌ನಿಂದ ಒಂದು ಸಮಿತಿಯನ್ನು ರಚಿಸಲಾಗಿತ್ತು ಆದಾಗ್ಯೂ ಮತ್ತೊಂದು ಸಮಿತಿಯನ್ನು ರಚಿಸಿ ಪರೀಕ್ಷಾ ಸಂಭಾವನೆಗಳನ್ನು ಪರಿಷ್ಕರಿಸಿರುವುದು ಸಮಂಜಸವಾದುದ್ದಲ್ಲ ಆದುದರಿಂದ ಮೊದಲು ಈಗ ರಚಿಸಿರುವ ಸಮಿತಿಯನ್ನು ಈ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ನಂತರ ಸಮಿತಿಯ ವರದಿಯನ್ನು ಅನುಮೋದಿಸಬೇಕೆಂದು ತಿಳಿಸಿದರು. ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮತ್ತು ಶ್ರೀ ಹೆಚ್. ಟಿ. ಶ್ರೀನಿವಾಸಯ್ಯರವರು ಸಹ ಅದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

**ಸಿಂಡಿಕೇಟ್ ನಿರ್ಣಯ:**

1. **ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷಾ ಸಂಭಾವನೆಗಳನ್ನು ಪರಿಷ್ಕರಿಸುವ ಸಂಬಂಧ ರಚಿಸಲಾಗಿರುವ ಸಮಿತಿಯನ್ನು ಅನುಮೋದಿಸಿತು.**
2. **ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪರೀಕ್ಷಾ ಸಂಭಾವನೆಗಳ ಕುರಿತು ಸಮಿತಿಯು ಶಿಫಾರಸ್ಸು ಮಾಡಿರುವ ದರಗಳನ್ನು ಅನುಮೋದಿಸಿತು.**

ವಿಷಯ ಸಂಖ್ಯೆ 5: ಸೃಷ್ಟಿ ಇನ್ಸಿಟಿಟ್ಯೂಟ್ ಆಫ್ ಆರ್ಟ್ ಡಿಸೈನ್ ಆಂಡ್ ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಅಂಕಪಟ್ಟಿಗಳನ್ನು ನೀಡಲು ನಿರ್ಣಯಿಸುವ ಬಗ್ಗೆ.

ಸಭಾಧ್ಯಕ್ಷರು ಪ್ರಸ್ತಾವನೆಯನ್ನು ಸಭೆಗೆ ವಿವರಿಸಿದರು ಈ ಸಂಸ್ಥೆ ಕುರಿತು ವಿಶ್ವವಿದ್ಯಾನಿಲಯವು ಕೈಕೊಳ್ಳಬೇಕಾದ ಕ್ರಮಕ್ಕಾಗಿ ಸಭೆಯ ಮುಂದೆ ಮಂಡಿಸಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ರವರು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಸದರಿ ಸಂಸ್ಥೆಗೆ ಮನ್ನಣೆ ನೀಡುವ ಕುರಿತು ಅಗತ್ಯ ಪರಿನಿಯಮಗಳನ್ನು ರಚಿಸಿ ಸಂಸ್ಥೆಯೊಂದಿಗೆ ಹೊಸ ಒಡಂಬಡಿಕೆ (MoU) ಮಾಡಿಕೊಳ್ಳಲು ಅಗತ್ಯ ಕ್ರಮ ಕೈಕೊಳ್ಳಲು ತೀರ್ಮಾನಿಸಲಾಗಿತ್ತು ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ರವರು ಮಾತಾನಾಡಿ ಸದರಿ ವಿಷಯವನ್ನು ವಿವರವಾಗಿ ಅಧ್ಯಯನ ಮಾಡಬೇಕಾಗಿರುವುದರಿಂದ ಸಮಿತಿಯೊಂದನ್ನು ರಚಿಸುವ ಅಗತ್ಯವಿದೆ ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದ ಈ ವಿಷಯದ ಬಗ್ಗೆ ಸರ್ಕಾರವು ದಿನಾಂಕ 9.2.2019 ರಲ್ಲಿ ನೀಡಿರುವ ಸೂಚನಾ ಪತ್ರದ ಅಡಿಯಲ್ಲಿ ಮುಂದಿನ ಕ್ರಮ ಕೈಕೊಳ್ಳಬಹುದೆಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಮತ್ತು ಶ್ರೀಮತಿ ಜ್ಯೋತಿ ವಿಜಯ್ ಶ್ರೀ ಹೆಚ್ ಆರ್ ಸತೀಶ್ ರವರು ಸಮಿತಿ ರಚಿಸಲು ಸಮ್ಮತಿಸಿದರು. ಸಭಾಧ್ಯಕ್ಷರು ಮಾತಾನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 66 (1) ರನ್ವಯ ವಿಶೇಷ ಅಧ್ಯಯನಗಳಿರುವ ಸಂಸ್ಥೆಗಳಿಗೆ ಸಂಯೋಜನಾ ಮಾನ್ಯತೆ ನೀಡಲು ಅವಕಾಶವಿದ್ದು ಈ ಸಂಬಂಧ ಪರಿನಿಯಮಾವಳಿಗಳು ರಚಿಸಿಕೊಂಡು ಅರ್ಹ ಸಂಸ್ಥೆಗಳಿಗೆ ಮಾನ್ಯತೆ ನೀಡಬಹುದೆಂದು ತಿಳಿಸಿದರು, ಇಂತಹ ಸಂಸ್ಥೆಗಳಲ್ಲಿ ಗುಣಾತ್ಮಕ ಸಂಶೋದನಾ ಅಧ್ಯಯನಗಳನ್ನು ನಡೆಸಲು ಅವಕಾಶಗಳಿದ್ದು ಶೈಕ್ಷಣಿಕ ಔನತಿಯ ದೃಷ್ಟಿಯಿಂದ ಪರಿನಿಯಮಾವಳಿ ರಚಿಸಿಕೊಳ್ಳುವುದು ಸೂಕ್ತ ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್ ಟಿ ಶ್ರೀನಿವಾಸಯ್ಯ ಮಾತಾನಾಡುತ್ತಾ ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯವು ಸೆಕ್ಷನ್ 66 ಅಡಿಯಲ್ಲಿ ಪರಿನಿಯಮಾವಳಿ ರಚಿಸಿದ್ದು, ಆ ಪರಿನಿಯಮಾವಳಿಯನ್ನು ಅಳವಡಿಸಿಕೊಂಡು ಅರ್ಹ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಕ್ರಮವಹಿಸಬಹುದು ಎಂದು ತಿಳಿಸಿದರು.

ಈ ವಿಷಯ ಕುರಿತು ಪರಿಶೀಲಿಸಿ ವರದಿ ನೀಡಲು ಕುಲಸಚಿವರು (ಮೌಲ್ಯಮಾಪನ) ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಬೇಕೆಂದು ಸಭೆಯಲ್ಲಿ ಚರ್ಚಿಸಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಹೆಸರುಗಳನ್ನು ಸೂಚಿಸಿತು.

ಸಿಂಡಿಕೇಟ್ ನಿರ್ಣಯ:

1. ಕಾರ್ಯಸೂಚಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ವರದಿ ನೀಡುವ ಸಲುವಾಗಿ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಯಿತು.

| | |
|---|---|
| 1. ಕುಲಸಚಿವರು (ಮೌಲ್ಯಮಾಪನ) | – ಅಧ್ಯಕ್ಷರು |
| 2. ಶ್ರೀಮತಿ ಜ್ಯೋತಿ ವಿಜಯ್ | – ಸದಸ್ಯರು |
| 3. ಶ್ರೀ ಹೆಚ್. ಟಿ. ಶ್ರೀನಿವಾಸಯ್ಯ | – ಸದಸ್ಯರು |
| 4. ಶ್ರೀ ಹೆಚ್. ಎನ್. ಹರಿಪ್ರಸಾದ | – ಸದಸ್ಯರು |

**2. ವಿಷಯದ ಕುರಿತು ವಸ್ತು ಸ್ಥಿತಿಯನ್ನು ವಿವರವಾಗಿ ಅಧ್ಯಯನ ಮಾಡಿ ಉಂಟಾಗಿರುವ ತೊಡಕುಗಳು ಮತ್ತು ಸೂಕ್ತ ಪರಿಹಾರೋಪಾಯಗಳನ್ನು ಶಿಫಾರಸ್ಸು ಮಾಡುವುದು ಸಮಿತಿಯ ಜವಾಬ್ದಾರಿಯಾಗಿರುತ್ತದೆ ಎಂದು ತೀರ್ಮಾನಿಸಲಾಯಿತು.**

**ವಿಷಯ ಸಂಖ್ಯೆ 06:** ಶ್ರೀ ಶಿವಶಂಕರ ಭೈರವ, ಸಹಾಯಕ, ಪರೀಕ್ಷಾ ವಿಭಾಗ ಅವರ ಸೇವೆಯನ್ನು ವಜಾಗೊಳಿಸುವ ಬಗ್ಗೆ

ಸಭಾಧ್ಯಕ್ಷರು ವಿಷಯವನ್ನು ಕುರಿತು ಸಭೆಗೆ ವಿವರಗಳನ್ನು ನೀಡಿದರು. ದಿನಾಂಕ 18.12.2020 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ಪರಿನಿಯಮಗಳ (CCA rules) ಸಂ. 28.5 ರ ಕ್ರಮ ಸಂಖ್ಯೆ (viii) ರಲ್ಲಿ ನಿಗದಿ ಪಡಿಸಿದ ದಂಡನೆಯನ್ನು ವಿಧಿಸಿ ಅವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ವಜಾಗೊಳಿಸಲು ಹಾಗೂ ಅವರಿಗೆ ಅಮಾನತ್ತಿನ ಅವಧಿಯಲ್ಲಿ ನೀಡಲಾದ ಜೀವಾನಾಂಶ ಭತ್ಯೆಯನ್ನು ವಸೂಲಿ ಮಾಡಲು ತೀರ್ಮಾನಿಸಿರುವ ವಿಷಯವನ್ನು ಸಭೆಗೆ ತಿಳಿಸಿ, ಸದರಿ ಶಿಕ್ಷೆಯು ಓರ್ವ ನೌಕರನಿಗೆ ವಿಧಿಸಬಹುದಾದ ಗರಿಷ್ಠ ದಂಡನೆಯಾಗಿದ್ದು, ನೌಕರನ ಜೀವನ ನಿರ್ವಹಣೆಯನ್ನು ಗಮನದಲ್ಲಿರಿಸಿಕೊಂಡು ದಂಡನೆಯ ಪ್ರಮಾಣವನ್ನು ಕಡಿತಗೊಳಿಸಬಹುದೆಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಆರ್.ಕೆ. ಚಂದ್ರನಾಥ್ ರವರು, ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಮತ್ತು ಡಾ. ಹೆಚ್. ಟಿ ಅರವಿಂದ್ ರವರು, ಶ್ರೀಮತಿ ಜ್ಯೋತಿ ವಿಜಯ್ ಮತ್ತು ಶ್ರೀ ಕರಣ್ ಕುಮಾರ್ ರವರು ಚರ್ಚೆಯಲ್ಲಿ ಭಾಗವಹಿಸಿದರು. ಅಂತಿಮವಾಗಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.

ಸಿಂಡಿಕೇಟ್ ನಿರ್ಣಯ:

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಅಮಾನತ್ತಿನಲ್ಲಿರುವ ಶ್ರೀ ಶಿವಶಂಕರ ಭೈರವ, ಸಹಾಯಕರು ಪರೀಕ್ಷಾ ವಿಭಾಗ ಇವರ ಮನವಿಯನ್ನು ಪರಾಮರ್ಶಿಸಿ ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯದ ಸಿಬ್ಬಂದಿಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ಪರಿನಿಯಮಗಳ **(CCA Rules) Part IV- Discipline – Penalties (1) (vi) – Compulsory Retirement.** ದಂಡನೆಯನ್ನು ವಿಧಿಸಲು ತೀರ್ಮಾನಿಸಲಾಯಿತು ಹಾಗೂ ಅಮಾನತ್ತಿನ ಅವಧಿಯಲ್ಲಿ ಕೆ.ಸಿ.ಎಸ್.ಆರ್ ನಿಯಮ **98.1(i)** ರ ಪ್ರಕಾರ ನೌಕರನಿಗೆ ನೀಡಿರುವ ಜೀವಾನಂಶ ಭತ್ಯೆಯನ್ನು ಹಿಂಪಡೆಯುವ ಸಂಬಂಧ ದಿನಾಂಕ **18.12.2020** ರಲ್ಲಿನ ನಿರ್ಣಯವನ್ನು ಯಥಾವತಾಗಿ ಜಾರಿಗೊಳಿಸಲು ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ 7: ಕೋವಿಡ್-19 ನಿಂದ ಮೃತಪಟ್ಟ ಪೋಷಕರ ಮಕ್ಕಳಿಗೆ ಸ್ನಾತಕೋತ್ತರ ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಒಂದು ಸೀಟನ್ನು ಕಾಯ್ದಿರಿಸುವ ಬಗ್ಗೆ ಹಾಗೂ ಉಚಿತ ಪ್ರವೇಶಾತಿ ನೀಡುವ ಕುರಿತು.

ಈ ವಿಷಯದ ಕುರಿತು ಸಭಾಧ್ಯಕ್ಷರು ಮಾತಾನಾಡಿ ಕೋವಿಡ್-19 ನ ಕಾರಣದಿಂದ ಕೆಲವು ಕುಟುಂಬಗಳಲ್ಲಿ ಮೃತಪಟ್ಟ ಪೋಷಕರ ಮಕ್ಕಳಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಒಂದು ಸೀಟನ್ನು ಒದಗಿಸಿ ಅವರಿಗೆ ಉಚಿತ ಪ್ರವೇಶಾತಿ ನೀಡುವ ಕುರಿತು ವಿವರಿಸಿದರು.

**ಸಿಂಡಿಕೇಟ್ ನಿರ್ಣಯ:**

**ವಿಷಯದ ಬಗ್ಗೆ ಚರ್ಚಿಸಿದ ಸಭೆಯ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿನ ಸ್ನಾತಕೋತ್ತರ ವಿಭಾಗಗಳಲ್ಲಿ ತಲಾ 01 ಸೀಟನ್ನು ಸೂಪರ್‌ನ್ಯೂಮರರಿ ಕೋಟಾದಡಿಯಲ್ಲಿ ಕೋವಿಡ್-19 ನಿಂದ ಮೃತಪಟ್ಟ ಪೋಷಕರ ಮಕ್ಕಳಿಗೆ ಮೀಸಲಿಡಲು ತೀರ್ಮಾನಿಸಿತ್ತು ಹಾಗೂ ಈ ಕೋಟಾದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಮೊದಲನೆ ಮತ್ತು ಎರಡನೆ ವರ್ಷಗಳಲ್ಲಿ ಶುಲ್ಕ ವಿನಾಯಿತಿಯನ್ನು ನೀಡಲು ನಿರ್ಣಯಿಸಿತು.**

**<u>ಟೇಬಲ್ ಅಜೆಂಡ-1</u>**

ವಿಷಯ: ಮೇವಾ ಡಿಗ್ರಿ ಕಾಲೇಜಿನ ಎಂ.ಬಿ.ಎ ಕೋರ್ಸಿನ ಹೊಸ ಸಂಯೋಜನೆ ಬಗ್ಗೆ.

ಸಿಂಡಿಕೇಟ್ ನಿರ್ಣಯ:

**ವಿಷಯದ ಚರ್ಚಿಸಿದ ಸಭೆಯು, ಈ ಕಾಲೇಜಿಗೆ ಸಂಬಂಧಿಸಿದ ಸ್ಥಳೀಯ ತಪಾಸಣಾ ವರದಿಯನ್ನು ಪರಾಮರ್ಶಿಸಿ,** Renewal of existing affilaiation **ಅನ್ನು ಅನುಮೋದಿಸಿತು ಮತ್ತು ಹೆಚ್ಚುವರಿ** (Additional) **ಕೋರ್ಸುಗಳಿಗೆ ಸಂಬಂಧಿಸಿದ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಅನುಮೋದಿಸಿತು.**

**<u>ಟೇಬಲ್ ಅಜೆಂಡ-2</u>**

ವಿಷಯ: MES Teachers College, Florence English Institute of B.Ed. Training ಮತ್ತು Kensri Degree College ಕಾಲೇಜುಗಳ ವರದಿಗಳನ್ನು ಸ್ಥಳೀಯ ತಪಾಸಣಾ ವರದಿಗಳನ್ನು ಅನುಮೋದಿಸುವ ಬಗ್ಗೆ

ಸಿಂಡಿಕೇಟ್ ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ **2020-21** ನೇ ಸಾಲಿನ ಸ್ಥಳೀಯ ವಿಚರಣಾ ಸಮಿತಿ ಅಧ್ಯಕ್ಷರಾದ ಡಾ. ಕೆ. ಆರ್. ರಮೇಶ್ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿರುವ ಸ್ಥಳೀಯ ವಿಚರಣಾ ಸಮಿತಿಯ **2** ವರದಿಗಳು ಮತ್ತು ಸದಸ್ಯರಾದ ಶ್ರೀ ಥಾಮಸ್ ನೀಲಿಯಾರ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿರುವ **01** ವರದಿಯನ್ನು ಅನುಮೋದಿಸಲಾಯಿತು.

**ಟೇಬಲ್ ಅಜೆಂಡ–3**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2021–22 ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಣ / ಹೊಸ ಕೋರ್ಸು/ ವಿಷಯ/ ಭಾಷೆಗಳ ಹಾಗೂ ವಿಧ್ಯಾರ್ಥಿ ಪ್ರಮಾಣ ಇತ್ಯಾದಿಗಳ ಬಗ್ಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

**ಸಿಂಡಿಕೇಟ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2021–22 ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಣ / ಹೊಸ ಕೋರ್ಸು/ ವಿಷಯ/ ಭಾಷೆಗಳ ಹಾಗೂ ವಿಧ್ಯಾರ್ಥಿ ಪ್ರಮಾಣ ಇತ್ಯಾದಿಗಳ ಬಗ್ಗೆ ಅರ್ಜಿಗಳನ್ನು ಉಲ್ಲೇಖಿತ ಸರ್ಕಾರದ ಪತ್ರ ಸಂಖ್ಯೆ: ಇಡಿ 34 ಇಜಿಒವಿ 2020(ಭಾಗ–2), ಬೆಂಗಳೂರು, ದಿನಾಂಕ–10.06.2021 ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ–2000ರಂತೆ ಕೈಗೊಳ್ಳಲು ಅನುಮೋದಿಸಲಾಯಿತು.**

**ಟೇಬಲ್ ಅಜೆಂಡ–4**

ವಿಷಯ:– ವಿಶ್ವವಿದ್ಯಾನಿಲಯದ ಅಭಿಯಂತರರ ವಿಭಾಗಕ್ಕೆ ಮುಖ್ಯ ಅಭಿಯಂತರರಾಗಿ ತಾತ್ಕಾಲಿಕವಾಗಿ ನೇಮಕಾತಿ ಮಾಡುವ ಬಗೆಗೆ.

ಈ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು ಮಾನ್ಯ ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ಮತ್ತು ಶ್ರೀ ಹೆಚ್. ಎನ್ ಹರಿಪ್ರಸಾದ ಸದರಿ ಕಾರ್ಯಸೂಚಿಯಲ್ಲಿ ಈ ಹಿಂದಿನ ಕುಲಪತಗಳು ಮತ್ತು ಕುಲಸಚಿವರ ಸಹಿ ಇರುವುದರಿಂದ ಟೇಬಲ್ ಅಜೆಂಡವನ್ನಾಗಿ ಮಂಡಿಸಿರುವುದು ಸೂಕ್ತವಲ್ಲ ಎಂದು ತಿಳಿಸಿದರು. ಹಾಗೂ ಈ ಸಂಬಂಧ ರಚಿಸಲಾಗಿರುವ ಸ್ಥಾಯಿ ಸಮಿತಿಯ ಪರಿಗಣನೆಗಾಗಿ ವಿವರಗಳನ್ನು ಮಂಡಿಸಲು ಅಭಿಪ್ರಾಯಿಸಿದರು. ಸಭೆಯಲ್ಲಿನ ಇತರೆ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿ ಈ ಕೆಳಗಿನಂತೆ ತೀರ್ಮಾನಿಸಲು ನಿರ್ಣಯಿಸಲಾಯಿತು

**ಸಿಂಡಿಕೇಟ್ ನಿರ್ಣಯ:**

ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಪ್ರಸ್ತಾವನೆಯನ್ನು ಈ ಸಂಬಂಧ ರಚಿಸಲಾಗಿರುವ ಸ್ಥಾಯಿ ಸಮಿತಿಯ ಪರಿಗಣನೆಗಾಗಿ ಮಂಡಿಸಲು ನಿರ್ಣಯಿಸಲಾಯಿತು.

**ಟೇಬಲ್ ಅಜೆಂಡ–5**

ವಿಷಯ:– ಮಾನ್ಯ ಕುಲಪತಿಗಳ ಆಪ್ತ–ಕಾರ್ಯಾಲಯಕ್ಕೆ ತಾತ್ಕಾಲಿಕವಾಗಿ ಸಿಬ್ಬಂದಿಗಳ ನೇಮಕಾತಿ ಮಾಡಿಕೊಳ್ಳಲು ಅನುಮೋದನೆಗಾಗಿ.

ವಿಷಯದ ಬಗ್ಗೆ ಪ್ರಸ್ತಾಪಿಸದ ಸಭಾಧ್ಯಕ್ಷರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 56 ಅಡಿಯಲ್ಲಿರುವ ಕುಲಪತಿಗಳ ಅಧಿಕಾರದ ಬಗ್ಗೆ ಪ್ರಸ್ತಾಪಿಸಿದರು ಮತ್ತು ಕುಲಪತಿಗಳ ಆಪ್ತಕಾರ್ಯಲಯದ ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ತಾಂತ್ರಿಕ ಜ್ಞಾನವುಳ್ಳ ಸಿಬ್ಬಂದಿಯ

ಅವಶ್ಯಕತೆಯನ್ನು ಪ್ರಸ್ತಾಪಿಸಿದರು. ಸಭೆಯಲ್ಲಿನ ಸದಸ್ಯರುಗಳು ಪ್ರಸ್ತಾವನೆ ಕುರಿತು ಚರ್ಚಿಸಿದರು ಸದಸ್ಯರಾದ ಶ್ರೀ ಹೆಚ್. ಟಿ. ಶ್ರೀನಿವಾಸಯ್ಯ, ಡಾ. ಹೆಚ್. ಟಿ. ಅರವಿಂದ್ ಮತ್ತು ಶ್ರೀ ಹೆಚ್. ಎನ್ ಹರಿಪ್ರಸಾದ ಇವರುಗಳು ತಾತ್ಕಲಿಕ ಸಿಬ್ಬಂದಿ ನೇಮಿಸಿಕೊಳ್ಳುವ ಸಂಬಂಧ ಈಗಾಗಲೇ ಸ್ಥಾಯಿ ಸಮಿತಿಯನ್ನು ರಚಿಸಲಾಗಿದ್ದು ಈ ಸಮಿತಿಯ ಮುಂದೆ ಸದರಿ ಪ್ರಸ್ತಾವನೆಯನ್ನು ತರುವುದು ಸೂಕ್ತವೆಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

**ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಈ ಸಂಬಂಧ ರಚಿಸಲಾಗಿರುವ ಸ್ಥಾಯಿ ಸಮಿತಿಯ ಪರಿಗಣನೆಗಾಗಿ ಮಂಡಿಸಲು ನಿರ್ಣಯಿಸಲಾಯಿತು.**

**<u>ಟೇಬಲ್ ಅಜೆಂಡ–6</u>**

**ವಿಷಯ ಸಂಖ್ಯೆ 1(ಅ): ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದಿನಾಂಕ 30.03.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ, ನಡವಳಿಯನ್ನು ಧೃಢೀಕರಿಸುವ ಬಗ್ಗೆ**

**ಸಿಂಡಿಕೇಟ್ ನಿರ್ಣಯ:**

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ದಿನಾಂಕ 30.03.2021 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಯನ್ನು ಪರಾಮರ್ಶಿಸಿ ಧೃಢೀಕರಿಸಿತು.**

**ಸಾಮಾನ್ಯ ಚರ್ಚೆ:**

1. ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮಾತಾನಾಡಿ ಹಿಂದಿನ ಸಿಂಡಿಕೇಟ್ ತೀರ್ಮಾನದ ಪ್ರಕಾರ ವಿಶ್ವವಿದ್ಯಾನಿಲಯ ಪ್ರಾರಂಭವಾದ ಸಾಲಿನಿಂದ ವಾರ್ಷಿಕ ವರದಿಗಳ ರೂಪು ರೇಷೆ ಹಾಗೂ ಮಾದರಿಯನ್ನು ಸಿದ್ಧಪಡಿಸಿ ಸಮಿತಿ ಸಲ್ಲಿಸಲಾಗಿದೆ. ಆದರೆ ಈ ವಿಷಯದ ಕುರಿತು ಅನುಮೋದನೆಗೆ ಸಿಂಡಿಕೇಟ್ ಸಭೆಗೆ ಮಂಡಿಸಿರುವುದಿಲ್ಲ. ಮುಂದಿನ ಸಭೆಯಲ್ಲಿ ಮಂಡಿಸಲು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ಮತ್ತು ಡಾ. ಹೆಚ್. ಟಿ. ಅರವಿಂದ್ ರವರು ಸಹ ಮುಂದಿನ ಸಭೆಗೆ ವರದಿ ಸಲ್ಲಿಸಲು ತಿಳಿಸಿದರು.

2. ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಹಣಕಾಸು ಸಮಿತಿ ಪುನರ್ ರಚಿಸಲು ತಿಳಿಸಿದರು.

3. ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಪ್ರಸ್ತುತ ಕೋವಿಡ್–19 ಹಿನ್ನೆಲೆಯಲ್ಲಿ ಮಹಾವಿದ್ಯಾಲಯಗಳ 2020–21 ರ ಸಂಯೋಜನಾ ಶುಲ್ಕವನ್ನು 2021–22 ನೇ ಸಾಲಿನ ಸಂಯೋಜನಾ ಶುಲ್ಕವಾಗಿ ಮುಂದುವರೆಸಲು ತಿಳಿಸಿದರು. ಹಾಗೂ ಮಾನ್ಯ ಸದಸ್ಯರಾದ ಡಾ. ಪದ್ಮಜಾ ರವರು ಮಾತಾನಾಡಿ 2021–22 ನೇ ಶೈಕ್ಷಣಿಕ ಸಾಲಿನಲ್ಲಿ ಕ್ರೀಡಾ ಚಟುವಟಿಕೆಗಳು ಹಮ್ಮಿಕೊಂಡಿರುವುದಿಲ್ಲ, ಲಾಕ್ ಡೌನ್ ಅವಧಿಯಲ್ಲಿ ಗ್ರಂಥಾಲಯವು ಕಾರ್ಯನಿರ್ವಹಿಸುವುದಿಲ್ಲ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಂದ ಕ್ರೀಡಾ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಸ್ವೀಕರಿಸುವುದು ಸೂಕ್ತವಲ್ಲ ಎಂದು ಅಭಿಪ್ರಾಯಿಸಿದರು.

ಮಾನ್ಯ ಸಭಾಧ್ಯಕ್ಷರು ಈ ವಿಷಯದ ಕುರಿತು ನಿಯಮಾನುಸಾರ ಅಗತ್ಯ ಕ್ರಮ ಕೈ ಕೊಳ್ಳಲಾಗುವುದು ಎಂದು ತಿಳಿಸಿದರು.

ಕುಲಸಚಿವರು ವಂದನಾರ್ಪಣೆ ಸಲ್ಲಿಸಿದರು ಹಾಗೂ ರಾಷ್ಟ್ರಗೀತೆಯೊಂದಿಗೆ ಸಿಂಡಿಕೇಟ್ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯಕಾರ್ಯದರ್ಶಿ ಹಾಗೂ
ಕುಲಸಚಿವರು

Registrar
Bengaluru City University
Central College Campus,
Bengaluru - 560001.

ಕುಲಪತಿಗಳು

Vice-Chancellor
Bengaluru City University
Central College Campus,
Bengaluru - 560001.